

# ರಸಬೋಧೆ

ಸ್ವಾಮಿ ಭೂತೇಶಾನಂದ
ಸಂಕಲನ : ಸ್ವಾಮಿ ಋತಾನಂದ
ಅನುವಾದ : ಸ್ವಾಮಿ ಮಂಗಳಾತ್ಮಾನಂದ

**ಬಂಗಾಳಿ M A.:** ಒಂದು ದಿನ ಆಗತಾನೇ ಭಕ್ತರು ಪೂಜ್ಯ ಸ್ವಾಮಿ ಭೂತೇಶಾನಂದಜಿ ಅವರಿಗೆ ಪ್ರಣಾಮ ಮಾಡಿ ಹೊರಟುಹೋಗಿದ್ದಾರೆ. ಸ್ವಾಮೀಜಿಯವರು ತಮ್ಮ ಕೊಠಡಿಯ ಹೊರಗಡೆ ಅತ್ತಿಂದಿತ್ತ ತಿರುಗಾಡುತ್ತಿದ್ದಾರೆ. ಹಾಗೆ ಓಡಾಡುವಾಗ, ತಮಗೆ ತಾವೇ ಮುಗುಳ್ನಗುತ್ತಿದ್ದಾರೆ! ಜೊತೆಗಿದ್ದ ಒಬ್ಬರು ಸಂನ್ಯಾಸಿಗಳು ಅವರನ್ನು ಕೇಳಿದರು, "ಹಾಗೇಕೆ ಒಬ್ಬರೇ ಮುಸಿಮುಸಿ ನಗುತ್ತಿದ್ದೀರಲ್ಲಾ?" ಆಗ ಸ್ವಾಮಿ ಭೂತೇಶಾನಂದಜಿಯವರು ಅದಕ್ಕೆ ಕಾರಣ ಹೇಳಲು ಆರಂಭಿಸಿದರು: "ನೋಡು, ಈಗತಾನೇ ಒಬ್ಬ ಭಕ್ತೆ ತನ್ನ ಸೊಸೆಯನ್ನು ಕರೆದುಕೊಂಡು ಬಂದಿದ್ದಳು. ಪ್ರಣಾಮ ಮಾಡುವ ಸಮಯದಲ್ಲಿ ಅಡಿಗಡಿಗೆ, 'ನನ್ನ ಸೊಸೆ ಬಂಗಾಳಿ M. A. ಮಾಡಿದ್ದಾಳೆ' ಎನ್ನುತ್ತಿದ್ದಳು. ಹೀಗೆ ಆಕೆ ಹಲವಾರು ಸಲ ಹೇಳುತ್ತಿದ್ದಳು. ಆಕೆಯನ್ನು ಸಂತೋಷಗೊಳಿಸಿ ಕಳಿಸಿಕೊಟ್ಟೆ. ನೋಡು, ಬಂಗಾಳಿ M. A. ಎನ್ನುವಾಗ ಒಂದು ಕಥೆ ನನ್ನ ನೆನಪಿಗೆ ಬರುತ್ತದೆ. ಅದನ್ನು ನೆನೆಸಿಕೊಂಡು ನಗುತ್ತಿದ್ದೇನೆ." ಹೀಗೆ ಹೇಳಿ ಕಥೆಯನ್ನು ಹೇಳಲಾರಂಭಿಸಿದರು:

ಒಬ್ಬ ಯುವಕ ಬಂಗಾಳಿ M. A. ಮಾಡಿದ್ದ. ಆದರೆ ಆ ತಿಳಿಗೇಡಿಗೆ ಎಲ್ಲಿಯೂ ಕೆಲಸ ಸಿಗಲಿಲ್ಲ. ಕೊನೆಗೆ ಒಂದು ಪ್ರಾಣಿಸಂಗ್ರಹಾಲಯದಲ್ಲಿ ಕಛೇರಿ ಸಹಾಯಕನ ಕೆಲಸ ಸಿಕ್ಕಿತು. ಆಫೀಸ್ ಅಸಿಸ್ಟೆಂಟ್ ಅಂದರೆ, ಕಛೇರಿ ಕೆಲಸದ ಜೊತೆಗೆ ಕಸ ಗುಡಿಸುವುದು, ಪ್ರಾಣಿಗಳಿಗೆ ಆಹಾರ ಕೊಡುವುದು ಎಲ್ಲವೂ ಸೇರಿತ್ತು. ಯುವಕ ಆ ಕೆಲಸವನ್ನು ಬಹಳ ನಿಷ್ಠೆಯಿಂದ ಮಾಡಲಾರಂಭಿಸಿದ. ಮೇಲಧಿಕಾರಿಗಳು ಈತನ ಕೆಲಸವನ್ನು ಖಾಯಂ ಮಾಡಿದರು. ಒಂದು ದಿನ ಒಬ್ಬ ಮೇಲ್ವಿಚಾರಕ ಅವನಿಗೆ ಹೇಳಿಕಳಿಸಿದ. ಯುವಕನ ಕೆಲಸದ ಬಗ್ಗೆ ಬಹಳ ಹೊಗಳಿದ. ಮಾತನಾಡುತ್ತ ಹೀಗೆ ಹೇಳಿದ: "ನನಗೊಂದು ಸಮಸ್ಯೆ ಬಂದಿದೆ. ನೀನು ಸ್ವಲ್ಪ ಸಹಾಯ ಮಾಡಿದರೆ, ನನ್ನ ಸಮಸ್ಯೆಗೆ ಪರಿಹಾರ ಸಿಗುತ್ತದೆ."

ಆ ಯುವಕ ಈ ಮಾತನ್ನು ಕೇಳಿದೊಡನೆಯೇ ಹಿಗ್ಗಿ ಹೀರೇಕಾಯಿಯಾದ. "ಸರ್, ಹೀಗೇಕೆ ಹೇಳುತ್ತೀರಿ? ನಾನು ಯಾವ ಕೆಲಸ ಮಾಡಲೂ ಸಿದ್ಧನಾಗಿದ್ದೇನೆ" ಎಂದು ಹೇಳಿದ. ಯುವಕನಿಂದ ಈ ಭರವಸೆ ಸಿಕ್ಕಿದ ಕೂಡಲೇ, ಮೇಲ್ವಿಚಾರಕ ಬಹಳ ಸಂಕೋಚದ ದನಿಯಲ್ಲಿ ಹೇಳಿದ, "ನಮ್ಮಲ್ಲಿದ್ದ ಚಿಂಪಾಂಜಿ ಸತ್ತುಹೋಗಿ ಎಷ್ಟೋ ದಿನಗಳಾಯಿತು. ಆ ಪಂಜರ ಈಗ ಖಾಲಿ ಇದೆ. ನೀನು ಒಂದು ಕೆಲಸ ಮಾಡಬೇಕು. ದಿನಕ್ಕೆರಡು ಗಂಟೆ ಬೆಳಿಗ್ಗೆ ಮತ್ತು ಸಂಜೆ, ಚಿಂಪಾಂಜಿಯ ವೇಷ ಹಾಕಿಕೊಂಡು ನೀನು ಅಲ್ಲಿ ಕುಳಿತುಕೊಳ್ಳಬೇಕು."

ಯುವಕ ಅದಕ್ಕೆ ಒಪ್ಪಿಕೊಂಡ. ಕೆಲವು ದಿನಗಳ ಕಾಲ ಆ ಕೆಲಸವನ್ನೂ ಮಾಡಿದ. ಒಂದು ದಿನ ಮೇಲ್ವಿಚಾರಕ ಬಂದು, ಈ ಚಿಂಪಾಂಜಿಯನ್ನು ನೋಡಿಕೊಂಡು ಹೋದ. ಮರುದಿನ ಅವನಿಂದ ಮತ್ತೆ ಕರೆ ಬಂತು. ತನಗೆ ಬಡ್ತಿ ಸಿಗಬಹುದೆಂಬ ಆಸೆಯಿಂದ ಯುವಕ ಹೋದ. ಮೇಲ್ವಿಚಾರಕ ಆ ಯುವಕನಿಗೆ ಹೇಳಿದ, "ನೋಡು, ನೀನು ಪಂಜರದಲ್ಲಿ ತೆಪ್ಪಗೆ ಕುಳಿತುಕೊಳ್ಳಬಾರದು. ನೋಡಲು ಚೆನ್ನಾಗಿರುವುದಿಲ್ಲ. ಮಕ್ಕಳು, ಯುವಕರು ಪ್ರಾಣಿಗಳನ್ನು ನೋಡಿ ನಕ್ಕು ಆನಂದಪಡಲು ಇಲ್ಲಿಗೆ ಬರುತ್ತಾರೆ. ನೀನು ಹೀಗೆ ಸುಮ್ಮನೆ ಕೂತರೆ ತಮಾಷೆಯಾಗಿ ಇರುವುದಿಲ್ಲ. ನೀನು ಆಗಾಗ್ಗೆ ಸ್ವಲ್ಪ ಓಡಾಡುವುದು, ನೆಗೆಯುವುದು, ಕುಪ್ಪಳಿಸುವುದು – ಇವನ್ನೆಲ್ಲ ಮಾಡುತ್ತಿರಬೇಕು. ಮಕ್ಕಳು ಹುರಿಗಡಲೆ, ಕಡಲೆ ಮುಂತಾದುವುಗಳನ್ನು ಕೊಟ್ಟರೆ ಅವನ್ನು ತೆಗೆದುಕೊಂಡು, ಅರ್ಧ ಸುಲಿದು, ಅರ್ಧ ತಿಂದು ಮಕ್ಕಳ ಕಡೆಗೂ ಸ್ವಲ್ಪ ಬಿಸಾಡು. ಆಗ ಅವರಿಗೂ ಬಹಳ ಖುಷಿಯಾಗುತ್ತದೆ." "ಹಾಗೇ ಆಗಲಿ, ಸರ್" ಎಂದ ಆ ಯುವಕ.

ಇನ್ನೊಂದು ದಿನ ಮೇಲ್ವಿಚಾರಕ ಮತ್ತೊಮ್ಮೆ ನೋಡಲು ಹೋದ. ಈ ಸಲ ಯುವಕ ಚಿಂಪಾಂಜಿಯ ವೇಷವನ್ನು ಬಹಳ ಚೆನ್ನಾಗಿ ಮಾಡುತ್ತಿದ್ದ. ಈ ಹೊಸ ಚಿಂಪಾಂಜಿಯನ್ನು ನೋಡಲು ಜನರು ಕಿಕ್ಕಿರಿದು ನಿಂತಿದ್ದರು. ಅಧಿಕಾರಿ ಮೆಚ್ಚುಗೆ ವ್ಯಕ್ತಪಡಿಸಿದ.

ಹೀಗೇ ಕೆಲವು ದಿನಗಳು ಕಳೆದವು. ಒಂದು ದಿನ ಈ ಹೊಸ ಚಿಂಪಾಂಜಿ ಅತಿ ಉತ್ಸಾಹದಿಂದ ತನ್ನ ಚೇಷ್ಟೆಗಳನ್ನು ತೋರಿಸುತ್ತಿತ್ತು. ಮೇಲೇರುವುದು, ಇಳಿಯುವುದು ಮಾಡುತ್ತಿತ್ತು. ಒಮ್ಮೆ ಹಾಗೆ ಮೇಲೇರುತ್ತಿದ್ದಾಗ ಮರದ ತಡಿಕೆಗಳು ತುಂಡಾಗಿ ಆಯತಪ್ಪಿತು. ಆಗ ಚಿಂಪಾಂಜಿ ಪಕ್ಕದಲ್ಲಿದ್ದ ಹುಲಿಯ ಪಂಜರದೊಳಗೆ ಧೊಪ್ಪನೆ ಬಿದ್ದಿತು. ಹುಲಿಯೋ, ಗರ್ಜಿಸುತ್ತ ಇವನ ಕಡೆಗೇ ದಿಟ್ಟಿಸುತ್ತ ಬರುತ್ತಿದೆ. ಚಿಂಪಾಂಜಿ ಭಯದಿಂದ ನಡುಗುತ್ತಿದೆ. ಮುಖವೆಲ್ಲ ಒಣಗಿ ಮರಗಟ್ಟಿ ಹೋಗಿದೆ. ಪ್ರಾಣಭಯದಿಂದ, ಹೇಗಾದರೂ ಮಾಡಿ ಹುಲಿಯ ಬಾಯಿಯಿಂದ ತಪ್ಪಿಸಿಕೊಳ್ಳಬೇಕೆಂದು ಆಕಡೆ ಈಕಡೆ ಓಡುತ್ತಿದೆ. ಹೊರಗೆ ಹೋಗಲು ಯಾವ ದಾರಿಯೂ ಕಾಣಿಸುತ್ತಿಲ್ಲ. ಹುಲಿ ನಿಧಾನವಾಗಿ ಗಂಭೀರಗತಿಯಿಂದ ಚಿಂಪಾಂಜಿಯ ಹತ್ತಿರ ಬಂದೇಬಿಟ್ಟಿತು. ಹತ್ತಿರಕ್ಕೆ ಬಂದು ಪಿಸುಗುಟ್ಟಿತು: "ಹೆದರಬೇಡ, ನಾನು ಮಾಡಿರುವುದೂ ಬಂಗಾಳಿ M. A. ನೇ!"

# ಋಗ್ವೇದ ಪರಿಚಯ

**ವೇದಗಳು ಭಾರತೀಯ ಸಂಸ್ಕೃತಿಯ ಆಕರಗಳು; ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆಯ ಉಗಮಸ್ಥಾನಗಳು. ಇವುಗಳನ್ನು ವೇದವ್ಯಾಸರು ನಾಲ್ಕು ಅಂಗಗಳಾಗಿ ವಿಂಗಡಿಸಿದರೆಂದು ನಂಬಿಕೆ. ಇವುಗಳಲ್ಲಿ ಋಗ್ವೇದವು ಜಗತ್ತಿನಲ್ಲೇ ಅತ್ಯಂತ ಪ್ರಾಚೀನ ಕೃತಿ. ಇದರ ವಿದ್ವತ್ಪೂರ್ಣ ಪರಿಚಯವನ್ನು ಮಾಡಿಕೊಟ್ಟಿರುವ ಲೇಖಕರು ಮೈಸೂರಿನ ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ವ್ಯಾಕರಣಶಾಸ್ತ್ರ ಅಧ್ಯಾಪಕರಾಗಿದ್ದು, ಈಗ ನಿವೃತ್ತರಾಗಿದ್ದಾರೆ. ಹಲವಾರು ವಿದ್ವತ್‌ಗೋಷ್ಠಿಗಳಲ್ಲಿ ಇವರು ಭಾಗವಹಿಸಿದ್ದಾರೆ; ಅನೇಕ ಕಡೆಗಳಲ್ಲಿ ಸನ್ಮಾನ ಸ್ವೀಕರಿಸಿದ್ದಾರೆ.**


**ವಿದ್ವಾನ್ ಹೆಚ್. ಎಂ. ಶಿಂಗಪ್ಪ**

ವೇದಗಳು ಭಾರತೀಯ ಸನಾತನ ಧರ್ಮದ ಉಜ್ವಲ ನಕ್ಷತ್ರಗಳು. ಇವು ನಮ್ಮ ಎಲ್ಲಾ ಲೌಕಿಕ ಮತ್ತು ಧಾರ್ಮಿಕ ನಡವಳಿಕೆಗಳ ಮತ್ತು ಆಚರಣೆಗಳ ಮೂಲ ಆಕರ ಗ್ರಂಥಗಳಾಗಿವೆ (**ವೇದೋಽಖಿಲೋ ಧರ್ಮಮೂಲಮ್** – *ಗೌತಮಧರ್ಮಸೂತ್ರ*). ಪ್ರಾಚೀನ ಮಹರ್ಷಿಗಳು ದೀರ್ಘಕಾಲಿಕ ತಪಸ್ಸಿನಿಂದ ಹಾಗೂ ಅನುಭವದಿಂದ ಸಾಕ್ಷಾತ್ಕರಿಸಿಕೊಂಡ ತತ್ತ್ವಗಳ ಪ್ರತಿಪಾದಕ ಗ್ರಂಥಗಳು ವೇದಗಳು. ಸಾಮಾನ್ಯ ಮಾನವನಿಂದ ಯಾವುದು ಪ್ರತ್ಯಕ್ಷದಿಂದಾಗಲಿ, ಅನುಮಾನಾದಿ ಪ್ರಮಾಣಗಳಿಂದಾಗಲಿ ತಿಳಿಯಲಸಾಧ್ಯವೋ, ಯಾವುದು ಮಾನವನ ಅಭ್ಯುದಯ–ನಿಶ್ರೇಯಸ್ಸುಗಳಿಗೆ ಪರಮಸಾಧನವೋ ಅದನ್ನು ತಿಳಿಸುವ ಗ್ರಂಥಗಳೇ ವೇದಗಳು (**ಪ್ರತ್ಯಕ್ಷೇಣಾನುಮಿತ್ಯಾ ವಾ ಯಸ್ತೂಪಾಯೋ ನ ಬುಧ್ಯತೇ । ಏತಂ ವಿದಂತಿ ವೇದೇನ ತಸ್ಮಾದ್ ವೇದಸ್ಯ ವೇದತಾ ॥** – *ಸಾಯಣ ಭಾಷ್ಯ*). ನಮ್ಮ ಪುರಾತನ ಆರ್ಯರ ಸಮಾಜ, ಸಭ್ಯತೆ, ಸಂಸ್ಕೃತಿ, ಧರ್ಮಗಳನ್ನು ತಿಳಿಯಲು ಉಪಲಬ್ಧವಿರುವ ಏಕಮಾತ್ರ ಸಾಧನವೇ ವೇದಗಳು.

ಈ 'ವೇದ' ಶಬ್ದವು **ವಿದ = ಜ್ಞಾನೇ** ಎಂಬ ಧಾತುವಿನಿಂದ ವ್ಯುತ್ಪನ್ನವಾದ ಶಬ್ದ. **ವಿದಂತಿ ಧರ್ಮಾಧಿಕಮ್ ಅನೇನ ಇತಿ ವೇದಃ** – ಇಷ್ಟಾರ್ಥ ಪ್ರಾಪ್ತಿ, ಅನಿಷ್ಟಾರ್ಥ ಪರಿಹಾರವನ್ನು ಯಾವ ಗ್ರಂಥಗಳಿಂದ ತಿಳಿಯುತ್ತೇವೆಯೋ ಅದೇ ವೇದವೆಂದು ಸಾಯಣರು 'ವೇದಾರ್ಥ ಪ್ರಕಾಶಿಕೆ'ಯಲ್ಲಿ ನಿರ್ವಚನವನ್ನು ಹೇಳಿದ್ದಾರೆ (**ಇಷ್ಟಪ್ರಾಪ್ತಿ ಅನಿಷ್ಟ ಪರಿಹಾರಯೋಃ ಅಲೌಕಿಕಂ ಉಪಾಯಂ ಯೋ ಗ್ರಂಥಃ ವೇದಯತಿ ಸ ವೇದಃ ।**).

ಸನಾತನವಾದ ನಂಬಿಕೆಯಂತೆ ವೇದಗಳಿಗೆ ಕರ್ತೃವಿಲ್ಲ. ಪರಮೇಶ್ವರನು ನಿತ್ಯವಾದ, ಅನಂತವಾದ ವೇದಗಳನ್ನು ಋಷಿಗಳಿಗೂ, ಋಷಿಗಳು ಸಾಮಾನ್ಯ ಮಾನವರಿಗೂ ಉಪದೇಶಿಸಿದರೆಂದು ತಿಳಿದುಬರುತ್ತದೆ. ಆದುದರಿಂದ ವೇದಗಳನ್ನು 'ಅಪೌರುಷೇಯ' (ಪುರುಷಕರ್ತೃಕವಲ್ಲ) ಎಂದು ಕರೆಯುವುದು ರೂಢಿ. ಋಗ್ವೇದವು ಪ್ರಪಂಚದಲ್ಲಿ ಉಪಲಬ್ಧವಿರುವ ಗ್ರಂಥಗಳಲ್ಲಿ ಪ್ರಾಚೀನತಮವಾದ ಗ್ರಂಥ. ವೇದದ ಭಾಷೆ ಅತ್ಯಂತ ಪ್ರಾಚೀನತಮವಾದ ಸಂಸ್ಕೃತ ಭಾಷೆ.

ಮೊದಲು ವೇದ ಒಂದೇ ಆಗಿತ್ತೆಂದೂ, ಒಂದಾಗಿದ್ದ ವೇದ ರಾಶಿಯನ್ನು ವೇದವ್ಯಾಸರು ನಾಲ್ಕಾಗಿ ವಿಂಗಡಿಸಿದರೆಂದೂ ತಿಳಿದುಬರುತ್ತದೆ. ಅವನ್ನು **ಋಗ್ವೇದ, ಯಜುರ್ವೇದ, ಸಾಮವೇದ** ಮತ್ತು **ಅಥರ್ವಣವೇದ**ವೆಂದು ಕರೆಯುತ್ತಾರೆ. ಛಂದೋಮಯವಾದ ವೇದವು ಋಗ್ವೇದವೆಂದೂ, ಗದ್ಯಾತ್ಮಕವಾದ



ವೇದವು (**ಗದ್ಯಾತ್ಮಕೋ ಯಜುಃ**) ಯಜುರ್ವೇದವೆಂದೂ, ಗಾನಾತ್ಮಕವಾದ ವೇದವು ಸಾಮವೇದವೆಂದೂ ಪ್ರಸಿದ್ಧವಾಗಿವೆ. ಈ ದೃಷ್ಟಿಯಿಂದ ಅಥರ್ವಣವೇದವು ಇವುಗಳಲ್ಲಿಯೇ ಅಂತರ್ಗತವಾಗುತ್ತದೆ. ಆದುದರಿಂದಲೇ ವೇದಗಳಿಗೆ **ತ್ರಯೀ** [**ವೇದಾಸ್ತ್ರಯಃ ತ್ರಯೀ** (ಅಮರಕೋಶ)] ಎಂದು ಹೆಸರು.

ಋಗ್ವೇದ ಸಂಹಿತೆಯ ಶಾಖೆಗಳು ೨೧ ಎಂದು ಮಹಾಭಾಷ್ಯಕಾರರಾದ ಪತಂಜಲಿಗಳು ಹೇಳಿದ್ದಾರೆ (**ಏಕವಿಂಶತಿಧಾ ಬಾಹ್ವೃಚ್ಯಮ್**). ಆದರೆ ಇಂದು ಶಾಕಲ ಶಾಖೆ ಮಾತ್ರ ಸಂಪೂರ್ಣವಾಗಿ ಉಪಲಬ್ಧವಾಗಿ ಪ್ರಚಾರದಲ್ಲಿದೆ. ಈ ಶಾಕಲ ಶಾಖೆಯನ್ನು ಅಧ್ಯಯನದ ಸೌಕರ್ಯದ ದೃಷ್ಟಿಯಿಂದ ಅಷ್ಟಕ, ಅಧ್ಯಾಯ, ವರ್ಗಗಳೆಂದು ವಿಭಾಗ ಮಾಡಿದ್ದಾರೆ. ಋಗ್ವೇದ ಸಂಹಿತೆಯಲ್ಲಿ ೮ ಅಷ್ಟಕಗಳಿವೆ; ಪ್ರತಿ ಅಷ್ಟಕದಲ್ಲಿ ೮ ಅಧ್ಯಾಯಗಳಿವೆ; ಪ್ರತಿ ಅಧ್ಯಾಯದಲ್ಲಿ ಅನೇಕ ವರ್ಗಗಳೂ, ಪ್ರತಿ ವರ್ಗದಲ್ಲಿ ಅನೇಕ ಋಕ್ಕುಗಳೂ (ಮಂತ್ರಗಳೂ) ಇವೆ.

ಋಗ್ವೇದದ ಶಾಕಲಸಂಹಿತೆಯನ್ನು ಇನ್ನೊಂದು ರೀತಿಯಲ್ಲಿ ವರ್ಗೀಕರಿಸಿದ್ದಾರೆ. ಇದು ಅತಿ ಪ್ರಾಚೀನವಾದ, ಸುಸಂಬದ್ಧವಾದ ವಿಭಾಗ. ಇದರ ಪ್ರಕಾರ ಋಕ್‌ಸಂಹಿತೆಯಲ್ಲಿ ೧೦ ಮಂಡಲಗಳೂ, ೮೫ ಅನುವಾಕಗಳೂ, ೧,೦೨೮ ಸೂಕ್ತಗಳೂ (ವಾಲಖಿಲ್ಯವೂ ಸೇರಿ), ೧೦,೫೫೨ ಮಂತ್ರಗಳೂ ಇವೆ. ಅವುಗಳನ್ನು ಹೀಗೆ ಈ ಪಟ್ಟಿಯಲ್ಲಿ ತೋರಿಸಲಾಗಿದೆ:

| ಮಂಡಲ | ಅನುವಾಕ | ಸೂಕ್ತ | ಮಂತ್ರ |
|---|---|---|---|
| ೧ | ೨೪ | ೧೯೧ | ೨೦೦೬ |
| ೨ | ೪ | ೪೩ | ೪೨೯ |
| ೩ | ೫ | ೬೨ | ೬೧೭ |
| ೪ | ೫ | ೫೮ | ೫೮೯ |
| ೫ | ೬ | ೮೭ | ೭೨೭ |
| ೬ | ೬ | ೭೫ | ೭೬೫ |
| ೭ | ೬ | ೧೦೪ | ೮೪೧ |
| ೮ | ೧೦ | ೧೦೩ | ೧೭೧೬ |
| ೯ | ೭ | ೧೧೪ | ೧೧೦೮ |
| ೧೦ | ೧೨ | ೧೯೧ | ೧೭೫೪ |
| ಒಟ್ಟು ೧೦ | ೮೫ | ೧,೦೨೮ | ೧೦,೫೫೨ |

**ಋಗ್ವೇದದ ಋಷಿಗಳು:** ಪ್ರತಿಯೊಂದು ಋಕ್ಕನ್ನು ಪ್ರಯೋಗಿಸುವಾಗಲೂ ಆ ಮಂತ್ರದ ಋಷಿ, ದೇವತೆ ಮತ್ತು ಛಂದಸ್ಸುಗಳನ್ನು ಸ್ಮರಿಸಿಯೇ ಪ್ರಯೋಗ ಮಾಡಬೇಕೆಂದು ಸರ್ವಾನುಕ್ರಮಣಿಕೆಯಲ್ಲಿ ತಿಳಿಸಿದೆ. **ಯಸ್ಯ ವಾಕ್ಯಂ ಸ ಋಷಿಃ, ದರ್ಶನಾತ್ ಋಷಿಃ** – ಋಷಿಗಳು ತಮ್ಮ ಅತೀಂದ್ರಿಯ ಶಕ್ತಿಯಿಂದ ವೇದಗಳನ್ನು ಸಾಕ್ಷಾತ್ಕರಿಸಿಕೊಂಡರು, ಆದುದರಿಂದ ಅವರು ಋಷಿಗಳಾದರು. (**ಅತೀಂದ್ರಿಯಸ್ಯ ವೇದಸ್ಯ ಪರಮೇಶ್ವರಾನುಗ್ರಹೇಣ ಪ್ರಥಮತೋ ದರ್ಶನಾತ್ ಋಷಿತ್ವಮ್** – ಸಾಯಣರು). ವೇದದ್ರಷ್ಟಾರರಾದ ಋಷಿಗಳು ಅನೇಕರು. ಅವರಲ್ಲಿ ಕೆಲವರ ಹೆಸರುಗಳು ಹೀಗಿವೆ: ಶತರ್ಚಿನರು, ಗೃತ್ಸಮದ, ವಿಶ್ವಾಮಿತ್ರ, ವಾಮದೇವ, ಅತ್ರಿ, ಭಾರದ್ವಾಜ, ವಸಿಷ್ಠ, ಕಾಣ್ವಪ್ರಗಾಥ. ಹೀಗೆ ಅನೇಕ ಋಷಿಗಳ ಹೆಸರುಗಳನ್ನು ಬೃಹದ್ದೇವತೆಯಲ್ಲಿ ಹೇಳಿದೆ. ಗೃತ್ಸಮದ ಮೊದಲಾಗಿ ವಸಿಷ್ಠ ಪರ್ಯಂತವಾದ ಋಷಿಗಳು ಎರಡನೇ ಮಂಡಲದಿಂದ ಏಳನೇ ಮಂಡಲಪರ್ಯಂತ ಇರುವ ಮಂಡಲಗಳಿಗೆ ಋಷಿಗಳು. ಈ ಆರು ಮಂಡಲಗಳನ್ನು 'ವಂಶೀಯ ಮಂಡಲ'ಗಳೆನ್ನುತ್ತಾರೆ. ಮೊದಲನೇ ಮಂಡಲಕ್ಕೆ ಶತರ್ಚಿನರೂ, ಎಂಟನೇ ಮಂಡಲಕ್ಕೆ ಕಾಣ್ವಪ್ರಗಾಥರೂ, ೯ನೇ ಮಂಡಲಕ್ಕೆ ಮಧುಚ್ಛಂದಸಾದಿ ಋಷಿಗಳೂ, ೧೦ನೇ ಮಂಡಲಕ್ಕೆ ಆಪ್ತ್ಯಸ್ತ್ರುತ, ಸಿಂಧುದ್ವೀಪ ಮೊದಲಾದವರೂ ಋಷಿಗಳು. ಮಧ್ಯದ ಮಂಡಲದ ಋಷಿಗಳಿಗೆ ಮಾಧ್ಯಮರೆಂದೂ, ೯ನೇ ಮಂಡಲದ ಋಷಿಗಳಿಗೆ ಪಾವಮಾನ್ಯರೆಂದೂ ಹೆಸರು.

ಮಂತ್ರದ್ರಷ್ಟಾರರಲ್ಲಿ ಸ್ತ್ರೀಯರೂ ಇದ್ದಾರೆ. ಅದಿತೀ, ಘೋಷಾ, ಅಪಾಲಾ, ವಿಶ್ವಧಾರಾ, ಬ್ರಹ್ಮಜಾಯಾ, ರೋಮಶಾ – ಹೀಗೆ ೨೭ ಸ್ತ್ರೀಋಷಿಗಳು ಇದ್ದಾರೆಂದು ಬೃಹದ್ದೇವತಾ ಗ್ರಂಥದಲ್ಲಿ ಹೇಳಿದೆ. ಸ್ತ್ರೀಋಷಿಗಳಿಗೆ 'ಋಷಿಕಾ' ಎಂದು ಹೆಸರು. ವಂಶೀಯ ಮಂಡಲಗಳಲ್ಲಿ ಆಯಾಯ ವಂಶದ ಋಷಿಗಳೇ ಮಂತ್ರದ್ರಷ್ಟಾರರು.

**ಋಗ್ವೇದದ ದೇವತೆಗಳು:** ಋಗ್ವೇದದಲ್ಲಿ ಅಗ್ನಿ, ಇಂದ್ರ, ವಾಯು ಮುಂತಾದ ದೇವತೆಗಳನ್ನು ಕುರಿತ ಸೂಕ್ತಗಳಿವೆ. ಪ್ರತಿಯೊಂದು ಮಂಡಲದ ಆರಂಭದ ಸೂಕ್ತಗಳ ದೇವತೆ ಅಗ್ನಿ. ಮುಂದಿನ ಕೆಲವು ಸೂಕ್ತಗಳು ಇಂದ್ರನಿಗೆ ಸಂಬಂಧಿಸಿವೆ. ಅನಂತರದ ಸೂಕ್ತಗಳಿಗೆ ಅನ್ಯ ದೇವತೆಗಳು. **ಯತ್ಕಾಮಃ ಋಷಿಃ ಯಸ್ಯಾಂ ದೇವತಾಯಾಂ ಆರ್ಥಪತ್ಯಮಿಚ್ಛನ್ ಸ್ತುತಿಂ ಪ್ರಯುಂಕ್ತೇ ತದ್ದೈವತಃ ಸ ಮಂತ್ರೋ ಭವತಿ** (ನಿರುಕ್ತ, ೭-೧-೪) ಎಂದು ದೇವತೆಯನ್ನು ನಿರೂಪಿಸಿದ್ದಾರೆ. ಅಂದರೆ ಯಾವ ದೇವತೆಯನ್ನು ಸ್ತುತಿಸಿ ಅಪೇಕ್ಷಿತಾರ್ಥವನ್ನು ಪಡೆಯಲು ಋಷಿಯು ಬಯಸುತ್ತಾನೋ ಆ ದೇವತೆಯೇ ಆ ಮಂತ್ರಕ್ಕೆ ದೇವತೆಯಾಗುತ್ತಾನೆ. ಕೆಲವು ಪ್ರಾಕೃತ ಪದಾರ್ಥಗಳನ್ನು ಕೂಡ ದೇವತೆಗಳೆಂದು ಸ್ತೋತ್ರ ಮಾಡಿದ್ದಾರೆಂದು ಬೃಹದ್ದೇವತೆಯಲ್ಲಿ ಹೇಳಿದೆ. ಅಶ್ವ, ಅಕ್ಷ, ರಥ ಮೊದಲಾದವುಗಳು ಇಂತಹ ದೇವತೆಗಳು. ದೇವತಾದ್ವಂದ್ವವನ್ನೂ ಕೆಲವು ಸೂಕ್ತಗಳಲ್ಲಿ ಸ್ತುತಿಸಿದ್ದಾರೆ. ಅಂತಹ ದೇವತೆಗಳೆಂದರೆ, ಮಿತ್ರಾವರುಣರು, ಇಂದ್ರಾಗ್ನೀ, ದ್ಯಾವಾಪೃಥಿವೀ ಇತ್ಯಾದಿ.

ಹೀಗೆ ದೇವತಾಬಾಹುಳ್ಯವನ್ನು ಹೇಳಿದರೂ **ತಿಸ್ರ ಏವ ದೇವತಾಃ ಕ್ಷಿತ್ಯಂತರಿಕ್ಷದ್ಯುಸ್ಥಾನಾಃ ಅಗ್ನಿರ್ವಾಯುಃ ಸೂರ್ಯ ಇತಿ** ಎಂದು ಕಾತ್ಯಾಯನರ ಅನುಕ್ರಮಣಿಕೆಯಲ್ಲಿ ಹೇಳಿದೆ. ಇದರ ಪ್ರಕಾರ, ಅಗ್ನಿ, ವಾಯು, ಸೂರ್ಯ – ಇವರು ಮೂರೇ ದೇವತೆಗಳು. ಅವರಿಗೆ ಕ್ರಮವಾಗಿ **ಪೃಥಿವೀ, ಅಂತರಿಕ್ಷ, ದ್ಯು** ಎಂಬ ಸ್ಥಾನಗಳು. ಇದಲ್ಲದೆ, ಈ ಮೂರು ಸ್ಥಾನಗಳಲ್ಲಿ ಬೇರೆ ಬೇರೆ ದೇವತೆಗಳೂ ಇರುತ್ತಾರೆ ಎಂದು ಹೇಳಲಾಗಿದೆ. ಹೀಗೆ ಸ್ಥಾನದ ದೃಷ್ಟಿಯಿಂದ ದೇವತೆಗಳು ಮೂರೇ ಆದರೂ, ಅವರಿಗೆ ಕ್ರಮಭೇದದಿಂದ ಅನೇಕ ಹೆಸರುಗಳು ಸಂದಿವೆ.

| | |
|---|---|
| **ಪೃಥಿವೀಸ್ಥಾನ ದೇವತೆಗಳು** | ಅಗ್ನಿ, ಪೃಥಿವೀ, ಸೋಮ, ನದೀ, ಬೃಹಸ್ಪತಿ |
| **ಅಂತರಿಕ್ಷಸ್ಥಾನ ದೇವತೆಗಳು** | ಇಂದ್ರ, ವಾಯು, ಅಪಾಂನಪಾತ್, ರುದ್ರ, ಮರುತ್ ಇತ್ಯಾದಿ |
| **ದ್ಯುಸ್ಥಾನ ದೇವತೆಗಳು** | ದ್ಯೌಃ, ಮಿತ್ರಾವರುಣ, ಸೂರ್ಯ, ಸವಿತೃ, ಪೂಷನ್ ಇತ್ಯಾದಿ |

ತದನಂತರ ಅದೇ ಗ್ರಂಥದಲ್ಲಿ (ಸರ್ವಾನುಕ್ರಮಣಿಕೆ) **ಏಕೈವ ವಾ ಮಹಾನಾತ್ಮಾ ದೇವತಾ । ಸ ಸೂರ್ಯ ಇತ್ಯಾಚಕ್ಷತೇ। ಸ ಸರ್ವಭೂತಾತ್ಮಾ । ತದುಕ್ತಮೃಷಿಣಾ ಸೂರ್ಯ ಆತ್ಮಾ ಜಗತಸ್ತಸ್ಥುಶ್ಚೇತಿ ॥** ಎಂದು ಹೇಳಿದೆ. ಇದರರ್ಥ ಹೀಗಿದೆ: "ಒಂದೇ ದೇವತೆ, ಅದು ಮಹಾನ್ ಆತ್ಮಾ, ಅದು ಸೂರ್ಯ. ಅದೇ ಸರ್ವಭೂತಗಳಿಗೂ ಆತ್ಮಾ, ಸರ್ವ ಸ್ಥಾವರ ಜಂಗಮಗಳಿಗೂ ಸೂರ್ಯನೇ ಆತ್ಮಾ." ಇದನ್ನೇ ವೇದದಲ್ಲಿ ಹೇಳಿದೆ ಎಂದು ಸರ್ವಾನುಕ್ರಮಣಿಕೆಯು ತಿಳಿಸುತ್ತದೆ. **ಇಂದ್ರಂ ಮಿತ್ರಂ ವರುಣಮಗ್ನಿಮಾಹುಃ** (೧-೧೬೪-೪೬) ಎಂಬ ಮಂತ್ರದಲ್ಲಿಯೂ, "ಒಂದೇ ಸತ್ ಪದಾರ್ಥವಿರುವುದು, ಅದನ್ನೇ ವಿದ್ವಾಂಸರು ಅಗ್ನಿ, ಯಮ, ವಾಯು ಎನ್ನುತ್ತಾರೆ" ಎಂದಿದೆ.

ಮೇಲಿನ ಅಂಶಗಳನ್ನು ಅವಲೋಕಿಸಿದಾಗ ಋಗ್ವೇದವು ಅಸಾಧಾರಣವೂ ಅಸದೃಶವೂ ಆದ, ಶಕ್ತಿಶಾಲಿಯಾದ

ಒಬ್ಬನೇ ನಿಯಂತೃವಿನಲ್ಲಿ ನಂಬಿಕೆಯನ್ನು ಹೊಂದಿದೆ ಎಂದು ತಿಳಿಯುತ್ತದೆ. ವಿಭಿನ್ನ ದೇವತೆಗಳನ್ನು, ಆ ನಿಯಂತೃವಿನ ನಾನಾ ಶಕ್ತಿಗಳ ಪ್ರತಿನಿಧಿಗಳಾಗಿ ಇಲ್ಲಿ ಭಾವಿಸಲಾಗಿದೆ. ಋಗ್ವೇದದಲ್ಲಿ ಪ್ರತಿಪಾದಿತವಾದ **'ಅನೇಕತೆಯಲ್ಲಿ ಏಕತೆಯ ಭಾವನೆ'** ಮತ್ತು **'ಭಿನ್ನತೆಯಲ್ಲಿ ಅಭಿನ್ನತೆಯ ದರ್ಶನ'**ಗಳು ದಾರ್ಶನಿಕ ಜಗತ್ತಿನಲ್ಲಿ ಅಸಾಧಾರಣವಾದ ಮೌಲಿಕ ತತ್ತ್ವಗಳಾಗಿವೆ ಎಂದು ಹೇಳಬಹುದು. ಈ ನಿಗೂಢ ತತ್ತ್ವದ ಅನುಸಂಧಾನ ಮಾಡಿದ ಪರಮ ಶ್ರೇಯಸ್ಸು ಪ್ರಾಚೀನ ಕಾಲದ ಆರ್ಷಚಕ್ಷುಸ್ಸಂಪನ್ನರಾದ ಋಗ್ವೇದದ ಮಹರ್ಷಿಗಳಿಗೆ ಸಲ್ಲುತ್ತದೆ.

**ಛಂದಸ್ಸು:** ಋಗ್ವೇದ ಛಂದೋಬದ್ಧವಾದ ವೇದ. ಇದರಲ್ಲಿರುವ ಎಲ್ಲ ಋಕ್ಕುಗಳೂ (ಮಂತ್ರಗಳೂ) ಛಂದೋಬದ್ಧವಾಗಿವೆ. ಆದುದರಿಂದ ಋಗ್ವೇದವನ್ನು 'ಛಂದಸ್ಸು' ಎಂದೇ ಕರೆದಿದ್ದಾರೆ. ಈ ಛಂದಸ್ಸುಗಳಲ್ಲಿ, ಗಾಯತ್ರೀ, ಉಷ್ಣಿಕ್, ಅನುಷ್ಟುಪ್, ಬೃಹತೀ, ಪಂಕ್ತಿ, ತ್ರಿಷ್ಟುಪ್, ಜಗತೀ ಮುಂತಾದ ೧೪ ಛಂದಸ್ಸುಗಳು ಮುಖ್ಯವಾದವು. **'ಯದಕ್ಷರ ಪರಿಮಾಣಂ ತತ್ ಛಂದಃ'** (ಅಕ್ಷರಗಳ ಪರಿಮಾಣವೇ ಛಂದಸ್ಸು) ಎಂಬುದು ಕಾತ್ಯಾಯನರ ನಿರ್ವಚನ. ಒಂದು ಪಾದದಲ್ಲಿ ೮ ಅಕ್ಷರಗಳಿದ್ದು, ಇಂತಹ ಮೂರು ಪಾದಗಳಿದ್ದರೆ, ಅದಕ್ಕೆ ಗಾಯತ್ರೀ ಛಂದಸ್ಸೆಂದು ಹೆಸರು, ಅನುಷ್ಟುಪ್ ಛಂದಸ್ಸಿನಲ್ಲಿ ೮ ಅಕ್ಷರಗಳ ೪ ಪಾದಗಳಿರುತ್ತವೆ. ಛಂದಸ್ಸಿನ ತಿಳಿವಳಿಕೆಗೋಸ್ಕರ ಕಾತ್ಯಾಯನರ ಸರ್ವಾನುಕ್ರಮಣಿಕೆಯನ್ನು ನೋಡಬಹುದು. ಅಥವಾ ವೇದಾಂಗವಾದ ಭಗವಾನ್ ಪಿಂಗಳಾಚಾರ್ಯರ ಛಂದಸ್ಸೂತ್ರಗಳಿಂದಲೂ ಛಂದಸ್ಸುಗಳ ಜ್ಞಾನವನ್ನು ಪಡೆಯಬಹುದು.

ಋಗ್ವೇದ ಸ್ತುತಿಪರವಾದ ವೇದ. ಪೃಥ್ವೀ, ಅಂತರಿಕ್ಷ, ದ್ಯುಸ್ಥಾನ – ಇವುಗಳಿಗೆ ಸಂಬಂಧಪಟ್ಟ ಒಂದೊಂದು ದೇವತೆಯ ಸ್ತೋತ್ರದ ಸ್ವರೂಪವನ್ನೂ ಸಂಕ್ಷಿಪ್ತವಾಗಿ ಕೆಳಗೆ ಕೊಡಲಾಗಿದೆ:

**ಪೃಥ್ವೀಸ್ಥಾನದ ದೇವತೆ – ಅಗ್ನಿ:** ಪೃಥ್ವೀಸ್ಥಾನದ ದೇವತೆಗಳಲ್ಲಿ ಅಗ್ನಿ ಪ್ರಧಾನ ದೇವತೆ. ಸುಮಾರು ಇನ್ನೂರು ಮಂತ್ರಗಳಿಂದ ಅಗ್ನಿಯನ್ನು ಋಷಿಗಳು ಸ್ತುತಿಸಿದ್ದಾರೆ. ಅಂತಹ ಒಂದು ಮಂತ್ರ ಹೀಗಿದೆ:

**ಗರ್ಭೋ ಯೋ ಅಪಾಂಗರ್ಭೋ ವನಾನಾಂ ಗರ್ಭಶ್ಚ ಸ್ಥಾತಾಂ ಗರ್ಭಶ್ಚ ರಥಾಮ್ । ಅದ್ರೌ ಚಿದಸ್ಮಾ ಅಂತರ್ದುರೋಣೇ ವಿಶಾಂ ನ ವಿಶ್ವೋ ಅಮೃತಸ್ವಾಧೀಃ ॥**

"ಅಗ್ನಿಯು 'ಅಪಾಂನಪಾತ್' ಎಂಬ ಸಂಜ್ಞೆಯಿಂದ ನೀರಿನಲ್ಲಿದ್ದಾನೆ. ಕಾಡಿನ ವೃಕ್ಷಗಳಲ್ಲಿ ಇವನು ದಾವಾಗ್ನಿ ರೂಪದಲ್ಲಿ ಇದ್ದಾನೆ. ಸ್ಥಾವರವಾದ ಶಿಲೆ ಮುಂತಾದವುಗಳಲ್ಲಿ ಇದ್ದಾನೆ. ಮನುಷ್ಯಾದಿ ಜಂಗಮ ಪದಾರ್ಥಗಳಲ್ಲಿ ವೈಶ್ವಾನರಾಗ್ನಿ ರೂಪದಿಂದ ಇದ್ದಾನೆ. ಈ ಅಗ್ನಿಗೆ ಹವಿಸ್ಸನ್ನು ಕೊಡುವರು. ಇವನು ಅಮರ." ಈ ಮಂತ್ರದಲ್ಲಿ ಅಗ್ನಿಯ ವಿಶ್ವವ್ಯಾಪಿತ್ವವನ್ನು ಪ್ರಕಾಶಪಡಿಸಿದೆ. ಅಗ್ನಿಯ ಮೇಲಿನ ಇನ್ನೊಂದು ಮಂತ್ರ ಹೀಗಿದೆ:

**ತ್ರೀಣಿ ಜಾನಾ ಪರಿಭೂಷಂತ್ಯಸ್ಯ ಸಮುದ್ರ ಏಕಂ ದಿವ್ಯೇಕಮಪ್ಸು (೧–೯೫–೩).**

"ಅಗ್ನಿ ಮೂರು ಜನ್ಮಸ್ಥಾನಗಳನ್ನು ಅಲಂಕರಿಸಿದ್ದಾನೆ – ಒಂದು ಜನ್ಮ, ಸಮುದ್ರದಲ್ಲಿ ಬಡಬಾನಲ ರೂಪದಲ್ಲಿ, ಇನ್ನೊಂದು ದ್ಯುಲೋಕದಲ್ಲಿ ಆದಿತ್ಯ ರೂಪದಿಂದ, ಮತ್ತೊಂದು ಅಂತರಿಕ್ಷದಲ್ಲಿ ವಿದ್ಯುತ್ ರೂಪದಲ್ಲಿ."

**ತಮಕುರ್ವನ್ ತ್ರೇಧಾ ಭಾವಾಯ ಪೃಥಿವ್ಯಾಮಂತರಿಕ್ಷೇ ದಿವೀತಿ ಶಾಕಪೂಣಿಃ** ಎಂದು ನಿರುಕ್ತದಲ್ಲಿ ಈ ಮಂತ್ರಾರ್ಥದ ಸಂವಾದಿಯಾಗಿ ಹೇಳಿದ್ದಾರೆ. ಅಗ್ನಿ ತ್ರಿಸ್ಥಾನದಲ್ಲಿರುವುದರಿಂದ ಭೂಲೋಕ, ಅಂತರಿಕ್ಷಲೋಕ ಮತ್ತು ದ್ಯುಲೋಕಗಳ ರಕ್ಷಕನಾಗಿದ್ದಾನೆ ಎಂದು ಇದರ ಅರ್ಥ.

ವೇದದ ಋಷಿಗಳು ಅಗ್ನಿಗೆ ಸಲ್ಲಿಸುವ ಉತ್ಕೃಷ್ಟ ಪ್ರಾರ್ಥನೆ ಹೀಗಿದೆ:

**ಅಗ್ನೇ ನಯ ಸುಪಥಾ ರಾಯೇ ಅಸ್ಮಾನ್**
**ವಿಶ್ವಾನಿ ದೇವ ವಯುನಾನಿ ವಿದ್ವಾನ್ ।**
**ಯುಯೋಧ್ಯಸ್ಮಜ್ಜುಹುರಾಣಮೇನೋ**
**ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ ॥**

"ಹೇ ಅಗ್ನಿದೇವ, ನಮ್ಮನ್ನು ಸಂಪದ್ಯುಕ್ತವಾದ ಸನ್ಮಾರ್ಗದಲ್ಲಿ ನಡೆಸು. ನೀನು ಸಕಲ ಜ್ಞಾನವನ್ನೂ ಹೊಂದಿದ ಮಹಾನುಭಾವ, ನಮ್ಮ ಪಾಪಗಳನ್ನು ನಾಶಪಡಿಸು. ನಿನಗೆ ಮತ್ತೆ ಮತ್ತೆ ನಮಸ್ಕಾರ ಮಾಡುತ್ತೇವೆ."

**ಅಂತರಿಕ್ಷ ಸ್ಥಾನದ ದೇವತೆ – ಇಂದ್ರ:** ಋಗ್ವೇದದಲ್ಲಿ ಇಂದ್ರ ಪ್ರಧಾನ ದೇವತೆ. ಋಗ್ವೇದದಲ್ಲಿ ಇಂದ್ರನನ್ನು ಸ್ತುತಿಸುವ ಸುಮಾರು ೨೫೦ ಸೂಕ್ತಗಳಿವೆ. ಬೇರೆ ಯಾವ ದೇವತೆಗೂ ಈ ಭಾಗ್ಯವಿಲ್ಲ. ಹಿರಣ್ಯವರ್ಣ, ಹಿರಣ್ಯಶ್ಮಶ್ರು, ಹಿರಣ್ಯಬಾಹುವಾದ ಪುರುಷಾಕಾರ ರೂಪ ಇವನದು. ತನ್ನ ಸಂಕಲ್ಪಕ್ಕನುಗುಣವಾಗಿ ನಾನಾ ರೂಪಗಳನ್ನು ಇವನು ಧರಿಸುತ್ತಾನೆ. ಇವನು ಧರಿಸಿರುವ ಆಯುಧ ವಜ್ರಾಯುಧ. ತ್ವಷ್ಟೃವು ಇವನಿಗೆ ಇದನ್ನು ಮಾಡಿಸಿಕೊಟ್ಟನು. ಆದುದರಿಂದ ಇವನಿಗೆ **ವಜ್ರಭೃತ್, ವಜ್ರದಕ್ಷಿಣ, ವಜ್ರಬಾಹು** ಎಂಬ ಬೇರೆ ಬೇರೆ ಹೆಸರುಗಳಿವೆ. – **ಅಭ್ಯೇನಂ ವಜ್ರ ಆಯಸಃ ಸಹಸ್ರಭೃಷ್ಟಿಃ** (೧–೮೦–೧೨). ಇವನ ರಥ ಸ್ವರ್ಣಮಯವಾದದ್ದು. ಹರಿತಾಶ್ವಗಳು ಇವನ ರಥವನ್ನು ಎಳೆಯುತ್ತವೆ (೧೦–೧೧೨–೨).

ಇಂದ್ರನು ಸೋಮಪಾನದಿಂದಾದ ಉತ್ಸಾಹದಿಂದ ಎಲ್ಲಾ ಸಾಹಸಕಾರ್ಯಗಳನ್ನೂ ಮಾಡುತ್ತಾನೆ. ವೃತ್ರವಧೆಯೂ, ಶತ್ರುಮರ್ದನವೂ ಸೋಮಪಾನದ ಪರಿಣಾಮದಿಂದಲೇ ನಡೆದವು [**ಸೋಮಸ್ಯತಾ ಮದ ಇಂದ್ರಶ್ಚಕಾರ** (೨–೧೫–೨)]. ಹೀಗೆ ಇಂದ್ರನ ಮಹಿಮೆ ಅಪಾರವಾದುದು.

**ದ್ಯುಸ್ಥಾನದ ದೇವತೆ – ಸವಿತೃ ದೇವತೆ:** ದ್ಯುಸ್ಥಾನದ ದೇವತೆಗಳಲ್ಲಿ ಸವಿತೃ ದೇವತೆ ಪ್ರಮುಖವಾಗಿದೆ. ಋಗ್ವೇದ ಸಂಹಿತೆಯಲ್ಲಿ ಹನ್ನೊಂದು ಸೂಕ್ತಗಳು ಈ ದೇವತೆಯ ಸ್ತುತಿಪರವಾಗಿದೆ.

ಯಾಸ್ಕರು ತಮ್ಮ ನಿರುಕ್ತದಲ್ಲಿ ಈ ದೇವತೆಯ ಬಗ್ಗೆ, **ತಸ್ಯ ಕಾಲೋ ಯದಾ ದ್ಯೌರಪಹತ ತಮಸ್ಕಾಕೀರ್ಣರಶ್ಮಿರ್ಭವತಿ** (ನಿರುಕ್ತ, ೧೨–೧೨) ಎಂದು ಹೇಳಿದ್ದಾರೆ. ಯಾವಾಗ ದ್ಯುಲೋಕದಲ್ಲಿ